# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 776 / 2021

ಸಿಡಬ್ಲ್ಯೂ- 10
ಪಿಡಬ್ಲ್ಯೂ-10

ದಿನಾಂಕಃ 27.03.2025.

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರುಃ - ಬಸವರಾಜು
ತಂದೆಯ/ಗಂಡನ ಹೆಸರುಃ - ಮಾರ್ಕಪ್ಪ
ವಯಸ್ಸುಃ -? 45 ವರ್ಷ
ಉದ್ಯೋಗಃ - ಒಕ್ಕಲುತನ.
ವಾಸಸ್ಥಳಃ - ಅಲ್ಲಿಪೂರ ಗ್ರಾಮ.

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಚಾಸಾ-1 ನನ್ನ ಹೆಂಡತಿಯಾಗಬೇಕು. 2021 ರಲ್ಲಿ ನಾನು ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ನನ್ನ ಹೆಂಡತಿಗೆ ಮತ್ತು ಚಾಸಾ-6 ರವರು ಕೂಡಿ ಚಾಸಾ-7 ರವರ ಆಟೋದಲ್ಲಿ ಅಲ್ಲಿಪೂರದಿಂದ ಯಾದಗಿರಿ ಬರುತ್ತಿದ್ದರು. ಸದರಿ ಆಟೋದ ಹಿಂದಿನಿಂದ ಬುಲೆರೋ ಪಿಕ್ ಪ್ ವಾಹನ ಬಂದು ಡಿಕ್ಕಿಪಡಿಸಿದ ಕಾರಣ ಅವರು ಗಾಯಗೊಂಡಿದ್ದರು. ನಂತರ ಗಾಯಗಳನ್ನು ಯಾದಗಿರಿ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದರು. ಸದರಿ ವಿಷಯವನ್ನು ನನ್ನ ಹೆಂಡತಿಯು ನನಗೆ ಫೋನ್ ಮಾಡಿ ತಿಳಿಸಿದ್ದರು. ನಂತರ ನಾನು ಆಸ್ಪತ್ರೆಗೆ ಬಂದಿದ್ದೆ. ಪ್ರಕರಣ ದಾಖಲು ಆದ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಆಟೋಕ್ಕೆ ಡಿಕ್ಕಿಪಡಿಸಿದ ವಾಹನದ ಚಾಲಕನು ಯಾರು ಇರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ಮುಂದೆ ನಾನು ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲುಃ ಸ.ಸ.ಅ ರವರಿಂದಃ

ದಿನಾಂಕಃ 22.10.2022 ರಂದು ಪೊಲೀಸರು ನನ್ನನ್ನು ವಿಚಾರಣೆಗೆ ಕರೆಸಿದ್ದರು ಎಂದರೆ ಸರಿ, ಆವಾಗ ಠಾಣೆಯಲ್ಲಿ ಅಪಘಾತ ಪಡಿಸಿದ ಬುಲರೋ ಗುಡ್ಸ್ ವಾಹನದ ನಂಃ ಕೆಎ-32-ಸಿ-9812 ನೇದ್ದನ್ನು ಮತ್ತು ಅದರ ಚಾಲಕನನ್ನು ಪೊಲೀಸ ಠಾಣೆಗೆ ಕರೆ ತಂದು ನಮ್ಮ ಮುಂದೆ ಹಾಜರು ಪಡಿಸಿದ್ದರು ಎಂದರೆ ಸರಿ. ನಂತರ ಸದರಿ ಚಾಲಕನನ್ನು ನೋಡಿ ದಿನಾಂಕಃ 22.02.2021 ರಂದು ಬೆಳಗ್ಗೆ 9 ಗಂಟೆಗೆ ಯಾದಗಿರಿ - ವಾಡಿ ಮುಖ್ಯ ರಸ್ತೆಯ ಮೇಲೆ ಆರ್ಯಭಟ ಶಾಲೆಯ ಮುಂದಿನಮುಖ್ಯ ರಸ್ತೆಯ ಹತ್ತಿರ ನಾವು ಕುಳಿತುಕೊಂಡು ಒಂಟಿದ ಆಟೋದ ನಂಃ ಕೆಎ-33-ಎ-8590 ನೇದ್ದಕ್ಕೆ ಹಿಂದಿನಿಂದ ಬಂದು ಇತನೇ ಅಪಘಾತ ಪಡಿಸಿರುತ್ತಾನೆ ಮತ್ತು ಇದೇ ವಾಹನದಿಂದ ಅಪಘಾತ ಆಗಿರುತ್ತದೆ ಎಂದು ನೋಡಿ ನನ್ನ ಸಮಕ್ಷಮ ಗುರುತಿಸಿರುತ್ತಾರೆ ಎಂದರೆ ಸರಿ. ನಂತರ ಸದರಿ ಬುಲೆರೋ ಪಿಕ್ ಪ್ ವಾಹನದ ಚಾಲಕನ ಹೆಸರನ್ನು ವಿಚಾರಿಸಿದ್ದಾಗ ಆತನು ತನ್ನ ಹೆಸರು ಪ್ರಶಾಂತಕುಮಾರ ತಂದೆ ನಾಗಶೆಟ್ಟಿ ಕಟಾಳೇ ಸಾಃ ಕಲುಬುರಗಿ ಇರುತ್ತದೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ. ಈ ರೀತಿಯಾಗಿ ನಾನು ದಿನಾಂಕಃ 22.10.2021 ರಂದು ಪೊಲೀಸ ಮುಂದೆ ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಆ ದಿನ ನಾವು ಪೊಲೀಸ ಠಾಣೆಯಲ್ಲಿ ನೋಡಿ ವ್ಯಕ್ತಿಯು ಈಗ ನ್ಯಾಯಾಲಯದ ಮುಂದೆ ಹಾಜರು ಇರುತ್ತಾನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ವಿ.ಎಸ್.ಪಿ. ರವರಿಂದಃ

ಆರೋಪಿತನು ಪಾಟೀ ಸವಾಲು ಮಾಡಲು ಸಮಯ ಕೋರಿರುತ್ತಾರೆ ಆದರೆ ಅವರು ಸಕಾರಣವನ್ನು ನೀಡಿರುವುದಿಲ್ಲ. ಆದ್ದರಿಂದ ಆತನ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.